ಶ್ರೀ ಜಗದೀಶ್ ಶೆಟ್ಟರ್ (ವಿರೋಧಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ಇಡೀ ರಾಜ್ಯದಲ್ಲಿ ಇದರ ಬಗ್ಗೆ ಹೋರಾಟ ನಡೆಯುತ್ತಿದೆ. ಆದ್ದರಿಂದ ಇದಕ್ಕೆ ಮೊದಲು ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು: ವಾರಕ್ಕೆ ಎರಡು ದಿವಸ ಅರ್ಧ ಗಂಟೆ ಪ್ರಶ್ನೆಗೆ ಅವಕಾಶ ಕೊಡುತ್ತೇನೆ. ಆದ್ದರಿಂದ ನಾಳೆ ದಿವಸ ಸದರಿ ವಿಷಯಕ್ಕೆ ಅವಕಾಶ ಮಾಡಿಕೊಡುತ್ತೇನೆ.

ಶ್ರೀ ಎ.ನಾರಾಯಣಸ್ವಾಮಿ: ಮಾನ್ಯ ಅಧ್ಯಕ್ಷರೆ, ನಾನು ಇದನ್ನು ಕಳುಹಿಸಿ ಈಗಾಗಲೇ 10 ದಿವಸ ಆಗಿದೆ.

ಅಧ್ಯಕ್ಷರು: 10 ದಿವಸ ಆಗಿಲ್ಲ. ನಾಳೆ ಅಥವಾ ನಾಡಿದು ಅವಕಾಶ ಮಾಡಿಕೊಡುತ್ತೇನೆ.

(೫) ವಿಷಯ: ಕಾವೇರಿ ಜಲಾನಯನ ಪ್ರದೇಶದ ರೈತರ ಸಮಸ್ಯೆಗಳ ಬಗ್ಗೆ

+ಶ್ರೀ ಪಿ.ಜಿ.ಆರ್. ಸಿಂಧ್ಯ(ಕನಕಪುರ): ಮಾನ್ಯ ಅಧ್ಯಕ್ಷರೆ, ಶೂನ್ಯ ವೇಳೆಯಲ್ಲಿ ಒಂದು ಪ್ರಮುಖವಾದಂಥ ವಿಚಾರವನ್ನು ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಕೊಡಬೇಕೆಂದು ತಮಗೆ ಒಂದು ಪತ್ರ ಬರೆದು ಕೇಳಿಕೊಂಡಿದ್ದೆ. ಸದರಿ ವಿಚಾರವನ್ನು ಮಾನ್ಯ ಸಚಿವರ ಗಮನಕ್ಕೆ ತರುವುದಕ್ಕಿಂತ ಸರ್ಕಾರದಿಂದ ಇದಕ್ಕೆ ಉತ್ತರ ನಿರೀಕ್ಷೆ ಮಾಡುತ್ತಿಲ್ಲ. ಈ ಒಂದು ಪ್ರಮುಖವಾದಂಥ ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಮಾಡಿ ಕೊಡಬೇಕೆಂದು ಕೇಳಲಿಕ್ಕೆ ನಾನು ಎದ್ದು ನಿಂತುಕೊಂಡಿದ್ದೇನೆ. ಏಕೆಂದರೆ, ಮಂಗಳವಾರ, ಬುಧವಾರ ಮತ್ತು ಗುರುವಾರ, ಶುಕ್ರವಾರ ಅಂದರೆ ಇನ್ನು ಐದು ದಿವಸದೊಳಗೆ ಈ ಸದನ ಮುಗಿದುಹೋಗುತ್ತದೆ. ನಂತರ ಬಜೆಟ್ ಮೇಲೆ ಉತ್ತರಿಸಿದ ಒಂದು ದಿನ ಮಾತ್ರ ಅಧಿವೇಶನ ನಡೆಯುತ್ತದೆ. ಇವತ್ತು ಬೆಳಿಗ್ಗೆ ನಮ್ಮ ರಾಜ್ಯದ ಹಿರಿಯ ನಾಯಕರಾದಂಥ ಶ್ರೀ ಜಿ. ಮಾದೇಗೌಡರ ಅಧ್ಯಕ್ಷತೆಯಲ್ಲಿ ನಾವೆಲ್ಲರೂ ಸೇರಿಕೊಂಡಿ ಒಂದು ಸಭೆಯನ್ನು ನಡೆಸಿದೆವು. ಸದರಿ ಸಭೆಗೆ ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಮಂಡ್ಯ ಜಿಲ್ಲೆಯ ಹಿರಿಯ ನಾಯಕರಾದಂಥ ಶ್ರೀ ಬಿ. ಸೋಮಶೇಖರ್‌ರವರು ಹಾಗೂ ಮಾನ್ಯ ಪುಟ್ಟಣ್ಣಯ್ಯನವರು ಮತ್ತು ಶ್ರೀ ನಂಜುಂಡಸ್ವಾಮಿಯವರು ಭಾಗವಹಿಸಿದ್ದರು. ಈ ಸರ್ಕಾರಕ್ಕೆ ಎಚ್ಚರಿಕೆ ಕೊಡಬೇಕೆಂಬ ದೃಷ್ಟಿಯಿಂದ ನಾನು ಇಲ್ಲಿ ಮಾತನಾಡುತ್ತಿದ್ದೇನೆ. ಮಾನ್ಯ ಮುಖ್ಯಮಂತ್ರಿಯವರು ಮಾನ್ಯ ರಾಜ್ಯಪಾಲರ ವಂದನಾರ್ಪಣೆಯ ಬಗ್ಗೆ ಉತ್ತರ ಕೊಡತಕ್ಕಂಥ ಸಂದರ್ಭದಲ್ಲಿ ಮಂಡ್ಯ ಜಿಲ್ಲೆಯ ರೈತರ ಹಿತರಕ್ಷಣೆ ಕಾಪಾಡುತ್ತೇನೆಂದು ಭರವಸೆ ಕೊಟ್ಟಿದ್ದರು. ಅಲ್ಲಿರತಕ್ಕಂಥ ವಸ್ತು ಸ್ಥಿತಿಯನ್ನು ಮಾನ್ಯ ಚಂದ್ರೇಗೌಡರು ಬಹಳ ದೀರ್ಘವಾಗಿ ಮತ್ತು ಸೂಕ್ಷ್ಮವಾಗಿ ಗಮನಿಸಬೇಕೆಂದು ಕೇಳಿಕೊಳ್ಳುತ್ತೇನೆ. ಏಕೆಂದರೆ, ಈ ಒಂದು ಪರಿಸ್ಥಿತಿ ಬೂದಿ ಮುಚ್ಚಿದಂಥ ಕೆಂಡದಂತೆ ಇದೆ. ಮಾನ್ಯ ಮುಖ್ಯಮಂತ್ರಿಯವರು ಈಗ ಸದನಕ್ಕೆ ಬಂದಿರತಕ್ಕಂಥದು ಒಳ್ಳೆಯದು ಆಯಿತು. ಮಾನ್ಯ ಮಾದೇಗೌಡರ ಅಧ್ಯಕ್ಷತೆಯಲ್ಲಿ ನಡೆದಂಥ ಸಭೆಯ ತೀರ್ಮಾನ ಏನೆಂದರೆ, ಮಾನ್ಯ ಮುಖ್ಯಮಂತ್ರಿಯವರು ಮೊನ್ನೆದಿವಸ ಮಾನ್ಯ ರಾಜ್ಯಪಾಲರ ಭಾಷಣದ ವಂದನಾರ್ಪಣೆಯ ಮೇಲೆ ಮಾತನಾಡತಕ್ಕಂಥ ಸಂದರ್ಭದಲ್ಲಿ ಮಂಡ್ಯ ಜಿಲ್ಲೆಯ ರೈತರ ಹಿತರಕ್ಷಣೆ ಮಾಡುತ್ತೇವೆ ಎನ್ನತಕ್ಕಂಥ ಭರವಸೆಯನ್ನು ಕೊಟ್ಟಿದ್ದಾರೆ. ಆದರೆ, ಅಲ್ಲಿನ ವಸ್ತು ಸ್ಥಿತಿ ಯಾವ ರೀತಿ ಇದೆ ಎಂದರೆ, ಮಂಡ್ಯ ಜಿಲ್ಲೆಯಲ್ಲಿ 2 ಲಕ್ಷ 5 ಎಕರೆ ಜಮೀನು ನೀರಾವರಿ ಪ್ರದೇಶವಿದೆ. ಹಾಗೆಯೇ ಚಾಮರಾಜನಗರ ಮತ್ತು ಮೈಸೂರು, ಹಾಸನ, ಒಟ್ಟು ನಾಲ್ಕು

ಜಿಲ್ಲೆಯಲ್ಲಿ ಲಕ್ಷಾಂತರ ಜಮೀನು ಇರತಕ್ಕಂಥದ್ದು ನಮಗೆಲ್ಲಾ ಗೊತ್ತಿದೆ. ಈಗ ಮಂಡ್ಯ ಜಿಲ್ಲೆಯೊಂದರಲ್ಲಿ 85 ಸಾವಿರ ಎಕರೆ ಕೂಳಿ ಕಬ್ಬು ಬೆಳೆದು ನಿಂತಿದೆ. ಈಗಾಗಲೇ ಕಡಿದು ಹಾಕಿರತಕ್ಕಂಥದ್ದು ಬೇರೆ ಆಯಿತು. ನಮಗೆಲ್ಲಾ ಗೊತ್ತಿರುವ ಹಾಗೆ ಒಂದು ಕಬ್ಬು ಕಟಾವು ಮಾಡಿದ ನಂತರ ಮತ್ತೆ ಕೊಳಿ ಕಬ್ಬಿನಿಂದ ಎರಡನೇ ಬೆಳೆಯನ್ನು ತೆಗೆದುಕೊಳ್ಳುತ್ತಾರೆ. ಒಂದು ಸಾರಿ ಕಬ್ಬನ್ನು ಕಟಾವು ಮಾಡುವುದರೊಳಗೆ ಸುಮಾರು 4 ಟಿ.ಎಂ.ಸಿ. ನೀರು ಬೇಕಾಗುತ್ತದೆ. ಇನ್ನು ನಾಲ್ಕು ಕಟಾವು ಮಾಡಲು ಮೇ ತಿಂಗಳ ಕೊನೆಯ ವರೆಗೆ ಸುಮಾರು 16 ಟಿಎಂಸಿ ನೀರು ಬೇಕಾಗುತ್ತದೆ. ಈಗ ನಮ್ಮಲ್ಲಿ ಕೇವಲ 1.5 ಟಿ.ಎಂ.ಸಿ ನೀರು ಸ್ಟೋರೆಜ್ ಇದೆ. ಹಾಗೆಯೇ 320 ಕ್ಯೂಸೆಕ್ಸ್‌ನಷ್ಟು ಇನ್‌ಫ್ಲೋ ಇದೆ. ಅದರಿಂದಾಗಿ ಸುಮಾರು 500 ದಿಂದ 800 ಕೋಟಿ ರೂಪಾಯಿಗಳಷ್ಟು ಬೆಳೆಗಳಿಗೆ ಹಾನಿಯಾಗುತ್ತದೆ, ಇದನ್ನು ವಿಶೇಷವಾಗಿ ಮಂಡ್ಯ, ಮೈಸೂರು, ಚಾಮರಾಜನಗರ ಜಿಲ್ಲೆಯ ಅಂದರೆ ಕಾವೇರಿ ಜಲಾನಯನ ಪ್ರದೇಶದ ರೈತರ ಸಮಸ್ಯೆಗಳನ್ನು ಬೆಳೆದಿರುವ ಬೆಳೆಗಳನ್ನು ಸಂರಕ್ಷಣೆ ಮಾಡುವ ದೃಷ್ಟಿಯಿಂದಾಗಿ ಬಜೆಟ್ ಸಮಯದಲ್ಲಿ ಪ್ರಸ್ತಾಪ ಮಾಡತಕ್ಕಂಥದ್ದು ಬಜೆಟ್‌ಗೆ ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಕೊಡುವಂಥದ್ದು ಆಗಲಿ, ಅದಕ್ಕೆ ತಾವು ಅಧ್ಯಕ್ಷರಾಗಿ ರೈತರ ಬಗ್ಗೆ ಕರುಣೆ ಇರತಕ್ಕಂಥವರು ವಿಶೇಷವಾಗಿ ಈ ಸದನದಲ್ಲಿ ಈ ವಿಚಾರಗಳನ್ನು ಪ್ರಸ್ತಾಪ ಮಾಡಲಿಕ್ಕೆ ಅವಕಾಶಗಳನ್ನು ಹಿಂದೆ ಮಾಡಿಕೊಟ್ಟಿದ್ದೀರಿ. ಇದಕ್ಕೆ ಒಂದು ಅರ್ಧಗಂಟೆಯ ಸಮಯವನ್ನು ತಾವು ದಯವಿಟ್ಟು ನಾಳೆ ಅಥವಾ ನಾಡಿದ್ದು ಸಮಯವನ್ನು ಇದಕ್ಕೆ ಕೊಡಬೇಕೆಂದು ಹಾಗೂ ಆ ಸಂದರ್ಭದಲ್ಲಿ ಕೂಡ ಮಾನ್ಯ ಮುಖ್ಯಮಂತ್ರಿಗಳು ಭಾಗವಹಿಸಬೇಕೆಂದು ನಾನು ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ಅದಕ್ಕೆ ಸಮಯವನ್ನು ನಿಗದಿ ಮಾಡಬೇಕು, ಏಕೆಂದರೆ ಅವರು ಎಪ್ರಿಲ್ 14ನೇ ತಾರೀಖಿನಿಂದ ರೈತರು ಮಂಡ್ಯದಿಂದ ಜಾಥಾ ಹೊರಡುತ್ತಿದ್ದಾರೆ. 18ನೇ ತಾರೀಖಿನಿಂದ ಮಾನ್ಯ ರಾಜ್ಯಪಾಲರನ್ನು ಹಾಗೂ ಮಾನ್ಯ ಮುಖ್ಯಮಂತ್ರಿಗಳನ್ನು ಭೇಟಿ ಮಾಡಬೇಕೆಂದು ಇದ್ದಾರೆ. ಇದರ ಸಂಬಂಧದಲ್ಲಿ ಮಾನ್ಯ ಜಿ.ಮಾದೇಗೌಡರು ಮಾನ್ಯ ಮುಖ್ಯಮಂತ್ರಿಗಳಿಗೆ ಒಂದು ಪತ್ರವನ್ನು ಬರೆದಿದ್ದಾರೆ, ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳ ಅಧೀನ ಕಾರ್ಯದರ್ಶಿ ಮಾನ್ಯ ಜಿ. ಮಾದೇಗೌಡರಿಗೆ ಒಂದು ಮರಳಿ ಉತ್ತರವನ್ನು ಬರೆದಿದ್ದಾರೆ. ಏನೆಂದರೆ, ನಿಮ್ಮ ಬೇಡಿಕೆಗಳ ಬಗ್ಗೆ ಮುಖ್ಯಮಂತ್ರಿಗಳಿಗೆ ಬರೆದಿರುವ ಪತ್ರ ಬಂದಿದೆ, ಇದರ ಬಗ್ಗೆ ಸಾಮಾನ್ಯವಾಗಿ ನಾನು ಅಂದುಕೊಂಡಿದ್ದೆ, ಮಾನ್ಯ ಮುಖ್ಯಮಂತ್ರಿಗಳು ಅದಕ್ಕೆ ಉತ್ತರವನ್ನು ಬರೆಯುತ್ತಾರೆ. ಏಕೋ ಏನೋ ಮುಖ್ಯ ಮಂತ್ರಿಗಳಿಗೆ ಮಾದೇಗೌಡರ ಮೇಲೆ ಸಿಟ್ಟು ಇರಬಹುದು, ಅದಕ್ಕೆ ಅವರ ಕಾರ್ಯದರ್ಶಿಗಳು ಒಂದು ಉತ್ತರವನ್ನು ಬರೆದು, ಇದನ್ನು ನಾನು ಜಲಸಂಪನ್ಮೂಲ ಕಾರ್ಯದರ್ಶಿಗಳಿಗೆ ಕಳುಹಿಸಿದ್ದೇನೆಂದು ಹೇಳಿ, ಎಲ್ಲರಿಗೂ ಕಳುಹಿಸುವಂತೆ ಇವರಿಗೂ ಉತ್ತರವನ್ನು ಕಳುಹಿಸಿದ್ದಾರೆ. ಇದೆಲ್ಲದರ ಬಗ್ಗೆ ಸ್ವಲ್ಪ ಪ್ರಸ್ತಾಪವನ್ನು ಮಾಡಬೇಕು, ಬಾಕಿ ಡಿಟೇಲ್ಸ್ ಎಲ್ಲಾ ಇದೆ. ಅದಕ್ಕಾಗಿ ಒಂದು ವಿಶೇಷವಾದ ಅವಧಿಯನ್ನು ತಾವು ದಯಮಾಡಿ ಈ ಚರ್ಚೆಗೆ ಅವಕಾಶವನ್ನು ಮಾಡಿಕೊಡಬೇಕೆಂದು ಹೇಳಿ ನಾನು ತಮ್ಮಲ್ಲಿ ವಿನಂತಿಯನ್ನು ಮಾಡಿಕೊಳ್ಳುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ (ವಿರೋಧಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ಇವತ್ತು ನಾನೂ ಕೂಡ ಬೆಳಿಗ್ಗೆ ಆ ಸಭೆಗೆ ಹೋಗಿದ್ದೆ, ಎಪ್ರಿಲ್ 14ನೇ ತಾರೀಖಿನಿಂದ ಅವರು ಒಂದು

ರ್ಯಾಲಿಯನ್ನು ಇಟ್ಟುಕೊಂಡು ಮಾನ್ಯ ರಾಜ್ಯಪಾಲರನ್ನು ಹಾಗೂ ಮಾನ್ಯ ಮುಖ್ಯ ಮಂತ್ರಿಗಳನ್ನು ಭೇಟಿಯಾಗುವ ಬಗ್ಗೆ ತೀರ್ಮಾನ ಮಾಡಿದ್ದಾರೆ. ಕಾವೇರಿ ನದಿ ಏರಿಯಾದಲ್ಲಿ ಕಬ್ಬುಬೆಳೆಗಾರರಾದ ರೈತರು ಇರಬಹುದು ನೀರನ್ನು ಬಿಡುವಲ್ಲಿ ಇವತ್ತು ಕಾವೇರಿ ಬೆಲ್ಟಿನಲ್ಲಿ ಕೃತಕವಾದ ಬರಗಾಲ ನಿರ್ಮಾಣವಾಗಿದೆ. ಮಾನ್ಯ ಮುಖ್ಯಮಂತ್ರಿಗಳು ಮೊನ್ನೆ ತಮ್ಮ ಭಾಷಣದಲ್ಲಿ ಹೇಳಿದರು, ನಾವು ಸರಿಯಾದ ರೀತಿಯಾದಂಥ ವ್ಯವಸ್ಥೆಯನ್ನು ಮಾಡಿದ್ದೇವೆ, ಇಲ್ಲದಿದ್ದರೆ ರೈತರು ದಂಗೆ ಏಳುತ್ತಿದ್ದರೆಂದು ಹೇಳಿದರು. ಅವರ ಬಗ್ಗೆ ನಾವು ವಿವರವಾಗಿ ಮಾತನಾಡಬೇಕಾಗುತ್ತದೆ. ಹೀಗಾಗಿ ಅಲ್ಲಿ ಒಂದು ರೀತಿಯಾದ ಆಕ್ರೋಶವಾದ ಭಾವನೆ ಅಲ್ಲಿ ಮೂಡುತ್ತಿದೆ. ಅದರ ಬಗ್ಗೆ ನಾವು ಡಿಟೇಲ್ಸ್ ಆಗಿ ಚರ್ಚೆಯನ್ನು ನಾವು ಮಾಡಬೇಕಾಗುತ್ತದೆ. ಆ ರೈತರ ಹಿತವನ್ನು ನಾವು ರಕ್ಷಣೆ ಮಾಡುವ ಕೆಲಸವಾಗಬೇಕಾಗಿದೆ. ಈ ಸದನದಲ್ಲಿ ಅದರ ಬಗ್ಗೆ ವಿಶೇಷವಾಗಿ ಚರ್ಚೆಯಾಗಬೇಕಾಗುತ್ತದೆ. ಕಾವೇರಿ ನಿಗಮವನ್ನು ಮಾಡಿದ್ದು ರೈತರು ಬೆಳೆಯನ್ನು ಕಳೆದುಕೊಂಡ ಬಗ್ಗೆ ಅಲ್ಲಿ ಪರಿಹಾರವನ್ನು ಕೊಡಬೇಕಾಗುತ್ತದೆ, ಅಲ್ಲಿ ಸಾಲವನ್ನು ಮನ್ನಾ ಮಾಡುವಂಥದ್ದು ಆಗಬೇಕಾಗುತ್ತದೆ. ಇದರ ಸಲುವಾಗಿ ನಾವು ವಿಶೇಷವಾದ ಒಂದು ಚರ್ಚೆಯನ್ನು ಮಾಡಬೇಕಾಗಿದೆ, ಅದಕ್ಕಾಗಿ ದಯವಿಟ್ಟು ತಾವು ಅವಕಾಶವನ್ನು ಮಾಡಿಕೊಡಬೇಕೆಂದು ಹೇಳಿ, ನಾನು ವಿನಂತಿಯನ್ನು ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು: ಸರ್ಕಾರದವರ ಜೊತೆಯಲ್ಲಿ ಸಮಾಲೋಚನೆಯನ್ನು ಮಾಡಿ, ಆಮೇಲೆ ನಾನು ನಿರ್ಧಾರವನ್ನು ತಮಗೆ ತಿಳಿಸುತ್ತೇನೆ.

(ಈ) ವಿಷಯ: ತಹಸೀಲ್ದಾರ್‌ರವರು ಶಾಸಕರ ಮೇಲೆ ಕೊಲೆಬೆದರಿಕೆ ಕೇಸ್ ದಾಖಲು ಮಾಡಿರುವ ಬಗ್ಗೆ

ಶ್ರೀ ಎ.ನಾರಾಯಣಸ್ವಾಮಿ (ಆನೇಕಲ್): ಮಾನ್ಯ ಅಧ್ಯಕ್ಷರೆ, ತಹಸೀಲ್ದಾರ್‌ರವರು ಶಾಸಕರು ನನಗೆ ಕೊಲೆ ಬೆದರಿಕೆ ಹಾಕಿದ್ದಾರೆಂದು ದೂರು ದಾಖಲೆ ಮಾಡಿ ಕೇಸ್ ಆಗಿದೆ. ನಿನ್ನೆಯಲ್ಲ ಮೊನ್ನೆ ಒಂದು ಪ್ರಶ್ನೆಯಾಗಿದೆ, ಅಕ್ರಮ ಸಕ್ರಮ ಸಾಗುವಳಿಯ ಬಗ್ಗೆ ಶ್ರೀ ಗೋಪಾಲ್ ಪೂಜಾರಿಯವರು ಒಂದು ಪ್ರಶ್ನೆಯನ್ನು ಮಾಡಿದ್ದಾರೆ, ವಿಧಾನಸಭಾ ಸದಸ್ಯರು ಅಧ್ಯಕ್ಷರಾಗಿರುವ ಅಕ್ರಮ ಸಕ್ರಮ ಸಮಿತಿಗಳನ್ನು ಪರಿಶೀಲಿಸಿ ಮಂಜೂರಾತಿ ಮಾಡಿರುವ ಬಗ್ಗೆ ಅಧಿಕಾರಿಗಳು ಅದನ್ನು ತಡೆಹಿಡಿಯಲು ಕಾನೂನಿನಲ್ಲಿ ಅವಕಾಶವಿದೆಯೇ? ಈ ಒಂದು ಸಮಿತಿಯನ್ನು ನಾನು ಕರೆದಿದ್ದೆ, ನನ್ನ ಕ್ಷೇತ್ರದಲ್ಲಿ 6740 ಅರ್ಜಿಗಳು ಇವೆ, ಇದುವರೆಗೂ ಎರಡುವರೆ ವರ್ಷವಾಗಿದೆ ಒಂದೇ ಒಂದು ಹಕ್ಕುಪತ್ರವನ್ನು ತಹಸೀಲ್ದಾರವರು ಕೊಡಲಿಲ್ಲ. 22ನೇ ತಾರೀಖಿನಂದು ನಾನು ಒಂದು ಸಭೆಯನ್ನು ಕರೆದಿದ್ದೆ ಅದಕ್ಕೆ ತಹಸೀಲ್ದಾರವರು ಉತ್ತರವನ್ನು ಕೊಡುತ್ತಾರೆ, ಹಿಂದಿನ ಯಾವುದೇ ಶಾಸಕರು ಮಂಜೂರು ಮಾಡಿದ್ದರೆ ಆ ಮಂಜೂರಾತಿಯ ಹಕ್ಕುಪತ್ರಗಳನ್ನು ನಾನು ಕೊಡುವುದಕ್ಕಾಗುವುದಿಲ್ಲ. ಅವರು ಮತ್ತೆ ನಾನು ಪರಿಶೀಲನೆ ಮಾಡಬೇಕಾಗಿದೆ ಎಂದು ಹೇಳುತ್ತಾರೆ. ಹಿಂದಿನ ಶಾಸಕರಿಗೆ ಅಗೌರವ, ಇಂದಿನ ಶಾಸಕರಿಗೆ ಯಾವುದೇ ಒಂದು ಸಮಿತಿಯ ಅಧಿಕಾರಿ ಇಲ್ಲವೆನ್ನುವ ಬಗ್ಗೆ ತಹಸೀಲ್ದಾರವರು ಹೇಳುತ್ತಾರೆ. ಮತ್ತೊಂದು ವಿಚಾರ, ಬಹುತೇಕ ಶಾಸಕರಿಗೆ ತಪ್ಪು ಮಾಹಿತಿಯನ್ನು ನೀಡುವುದು, ಇತ್ತೀಚೆಗೆ ಸರ್ಕಾರದ ಆದೇಶವಿದೆ, ಯಾವ ಕಡುಬಡವ ರೈತ ಸರ್ಕಾರದ ಭೂಮಿಯನ್ನು ಸಾಗುವಳಿ ಮಾಡುತ್ತಿರುತ್ತಾನೆ, ಅವನಿಗೆ 4 ಎಕರೆ 38 ಗುಂಟೆಯ ಒಳಗಡೆ ಇದ್ದರೆ ಜಮೀನು ಮಂಜೂರು ಮಾಡುವಂತಿಲ್ಲ, ಅದರ ಒಳಗಡೆ ಇರುವಂಥ ಯಾವುದೇ